<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.</u>

<u>ಸಿ.ಸಿ.ನಂ.**418/2018**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | ರವಿ ಗುತ್ತಲ | ಸಿಡಬ್ಲ್ಯೂ | 3 |
| ತಂದೆ ಹೆಸರು | ರಾಮಪ್ಪ | ಪಿಡಬ್ಲ್ಯೂ | 1 |
| ವಯಸ್ಸು | 30 ವರ್ಷ | | |
| ಉದ್ಯೋಗ | ಕೂಲಿ | | |
| ವಾಸಸ್ಥಳ | ನೆಗಳೂರ ತಾಃ ಹಾವೇರಿ | | |

<u>ದಿಃ **03.12.2025** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>
<u>ಮುಖ್ಯ ವಿಚಾರಣೆಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.</u>

**1).** ನನಗೆ ಚಾ.ಸಾ-2 ಮತ್ತು 8 ರವರ ಪರಿಚಯ ಇರುವದಿಲ್ಲ. ಈ ಪರಕರಣಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇರುವದಿಲ್ಲ ಹಾಗೂ ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರನ್ನು ಜರುಗಿಸಿರುವದಿಲ್ಲ. ಸಾಕ್ಷಿಗೆ ಆತನು ಸಹಿ ಮಾಡಿದಂತಹ ದಾಖಲಾತಿಯನ್ನು ತೋಸಲಾಗಿ ಸದರಿ ದಾಖಲಾತಿಯು ಘಟನಾ ಸ್ಥಳದ ಪಂಚನಾಮೆ ಮತ್ತು ಕಚ್ಚಾ ನಕಾಶೆಯಾಗಿದ್ದು, ಅವುಗಳನ್ನು ನಿ.ಪಿ-1 ಮತ್ತು 2 ಎಂದು ಗುರುತಿಸಲಾಯಿತು. ನಿ.ಪಿ-1 ಮತ್ತು 2 ದಾಖಾಲತಿಗಳಲ್ಲಿ ಸಾಕ್ಷಿಯು ಸಹಿ ಮಾಡಿದಂತಹ ಸಹಿಗಳನ್ನು ನಿ.ಪಿ-1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ ತಾನು ಇರುವದಾಗಿ ಒಪ್ಪಿದದರಿಂದ ಅವುಗಳನ್ನು ನಿ.ಪಿ-3 ಮತ್ತು 4 ಎಂದು ಗುರುತಿಸಲಾಯಿತು. ನಿ.ಪಿ-3 ಮತ್ತು 4 ಪೋಟೋಗಳನ್ನು ಎಲ್ಲಿ ಮತ್ತು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ನಿ.ಪಿ-1 ಮತ್ತು 2 ದಾಖಲಾತಿಗಳಿಗೆ ನನ್ನ ಜೊತೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ. ನಿ.ಪಿ-1 ಮತ್ತು 2 ದಾಖಲಾತಿಗಳಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವದಿಲ್ಲ.

<u>**(**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಪರಿಶೀಲಿಸಿ ಅನುಮತಿ ನೀಡಲಾಯಿತು**)**</u>

<u>ಪಾಟೀ ಸವಾಲುಃ ಹಿ.ಸ.ಸ.ಅಭಿಯೋಜಕರಿಂದ.</u>

**2)** ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯು ಪಿರ್ಯಾದಿ ಮತ್ತು ಚಾ.ಸಾ-8 ಇವರಿಗೆ ಜಮೀನನ್ನು ಕೊಡಿಸುತ್ತೇನೆ ಎಂದು ಭರವಸೆ ನೀಡಿ ಅವರಿಂದ ಹಣವನ್ನು ಸ್ವೀಕರಿಸಿದ ಸ್ಥಳದಲ್ಲಿ ಪೊಲೀಸರು ನನ್ನನ್ನು ನಿ.ಪಿ-1 ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತಾರೆ ಅಂದರೆ ಸರಿಯಲ್ಲ ಮತ್ತು ಅದೇ ರೀತಿ ಘಟನಾ

ಸ್ಥಳದಲ್ಲಿ ಘಟನಾ ಸ್ಥಳದ ಪಂಚನಾಮೆಗೆ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನಿ.ಪಿ-1 ಮತ್ತು 2 ದಾಖಲಾತಿಗಳನ್ನು ಜರುಗಿಸುವಾಗಿ ನನ್ನ ಜೊತೆ ಚಾ.ಸಾ-2 ಮತ್ತು 8 ರವರು ಹಾಜರಿದ್ದರು ಅಂದರೆ ನನಗೆ ಗೊತ್ತಿರುವದಿಲ್ಲ. ನನಗೆ ನಿ.ಪಿ-1 ರಿಂದ 4 ದಾಖಲಾತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ನಾನು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.